ಆ) ಪ್ರೌಢಶಿಕ್ಷಣದ ನಂತರ ಈ ಅವಕಾಶ ನೀಡಿದಲ್ಲಿ ವಿದ್ಯಾರ್ಥಿಗಳಿಗೆ ಆಸಕ್ತಿ ಉಂಟಾಗುತ್ತದೆ.

ಇ) ಹೌದು.

ಈ) 1993-94ನೇ ಸಾಲಿನಿಂದ 3ಘಟಕಾಂಶಗಳಲ್ಲಿ ಅಕ್ಷಯ ಯೋಜನೆಯನ್ನು ಪರಿಷ್ಕರಿಸಲಾಗಿದ್ದು ಇದರನ್ವಯ ಹಣವನ್ನು ನೀಡಲಾಗುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಮಕ್ಕಳಲ್ಲಿ ಹುದುಗಿರುವ ಪ್ರತಿಭೆಗಳ ವಿಕಸನವೇ ಶಿಕ್ಷಣದ ಗುರಿ, ಮಕ್ಕಳ ಅಭಿರುಚಿಗೆ ತಕ್ಕಂತೆ ವಿದ್ಯಾಭ್ಯಾಸವನ್ನು ಅವರು ಸಾಮಾನ್ಯ ಶಿಕ್ಷಣ ಪೂರೈಸಿದ ನಂತರವೇ ನೀಡಬೇಕಾಗುತ್ತದೆ.

ವೃತ್ತಿ ಶಿಕ್ಷಣ ಕೋರ್ಸುಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಸೇವೆಯು ಸಕ್ರಮ

2013: ಶ್ರೀ ಬಿ.ಐ. ಪಾಟೀಲ್ (ಉಚ್ಚಂಗಾವ್):-

ವಯಸ್ಕರ ಮತ್ತು ವೃತ್ತಿ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರವು ವೃತ್ತಿ ಶಿಕ್ಷಣ ಕೋರ್ಸುಗಳಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯನ್ನು ಸಕ್ರಮಗೊಳಿಸುವುದೇ;

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು;

ಇ) ಅವರುಗಳು 14 ವರ್ಷದಿಂದ ಕೆಲಸ ಮಾಡುತ್ತಿರುವುದರಿಂದ ಅವರುಗಳ ಸೇವೆಯನ್ನು ಸಕ್ರಮಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಮತ್ತು ವೃತ್ತಿ ಶಿಕ್ಷಣ ರಾಜ್ಯ ಸಚಿವರು):-

ಅ) ಸದ್ಯಕ್ಕೆ ಸಾಧ್ಯವಿಲ್ಲ.

ಆ) ವೃತ್ತಿ ಶಿಕ್ಷಣ ಕೋರ್ಸುಗಳು ಕೇಂದ್ರ ಸರ್ಕಾರದ ಯೋಜನೆ ಅಡಿ ಮಂಜೂರಾಗುವ ಅನುದಾನದಿಂದ ನಡೆಯುತ್ತಿದ್ದು, ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಸರ್ಕಾರದಿಂದ ಖಾಯಂ ಆಗಿ ಮಂಜೂರಾದ ಹುದ್ದೆಗಳಿಲ್ಲವಾದ್ದರಿಂದ ಮತ್ತು ಕೆಲವೊಂದು ಕೋರ್ಸುಗಳು ತಾತ್ಕಾಲಿಕವಾಗಿರುವುದರಿಂದ, ಸರ್ಕಾರದಿಂದ ಖಾಯಂ ಹುದ್ದೆಗಳ ಮಂಜೂರಾತಿ ಮಾಡಲು ಸಾಧ್ಯವಾಗಿಲ್ಲ.

ಇ) ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಬಗ್ಗೆ ಮೊಕದ್ದಮೆಗಳಿದ್ದು, ಅದು ಇತ್ಯರ್ಥವಾದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಹಾಲು ಮಹಾಮಂಡಳಿಯಲ್ಲಿ ಡೈರಿ ಉದ್ಯಮದಲ್ಲಿ ವೃತ್ತಿ ತರಬೇತಿ ಹೊಂದಿದ ಅಭ್ಯರ್ಥಿಗಳ ನೇಮಕ

2014: ಶ್ರೀ ಬಿ.ಐ. ಪಾಟೀಲ (ಉಚ್ಚಗಾಂವ್):-

ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?